ಆಕ್ಟ್ರಾಯಿ ಪರಿಹಾರಧನ ಪಡೆಯಂದ ನಗರ ಸಭೆಗಳ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಬಗ್ಗೆ.

೬೭೧. **ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).**— ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಆಕ್ಟ್ರಾಯ್ ಪರಿಹಾರ ಧನವನ್ನು ಪಡೆಯಂದಿರುವ ನಗರ ಸಭೆಗಳ ಸಂಖ್ಯೆ ಎಷ್ಟು ?

ಆ) ಆಕ್ಟ್ರಾಯಿ ಪರಿಹಾರ ಧನವನ್ನು ಪಡೆಯಂದಿರುವ ನಗರಸಭೆಗಳು ಆರ್ಥಿಕ ಮುಗ್ಗಟ್ಟನ್ನು ಎದುರಿಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ, ಆಕ್ಟ್ರಾಯ್ ಪರಿಹಾರ ಧನ ಪಡೆಯಂದಿರುವ ನಗರ ಸಭೆಗಳಿಗೆ ವಿಶೇಷ ಅನುದಾನ ವನ್ನೇನಾದರೂ ನೀಡಲಾಗುವುದೆ ?

ಈ) ಹಾಗಿದ್ದಲ್ಲಿ, ಅನುದಾನದ ಮೊತ್ತವೆಷ್ಟು ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು, ಆಹಾರ ಮತ್ತು ಸರಬರಾಜು ಮಂತ್ರಿಗಳು).—

ಅ) ೧-೪-೧೯೭೯ ರಂದು ಆಕ್ಟ್ರಾಯಿ ವಸೂಲಿಯನ್ನು ರದ್ದುಪಡಿಸಲಾಯಿತು. ಅಂದಿನವರೆಗೆ ರಾಜ್ಯದಲ್ಲಿ ೨೨೭ ಪುರಸಭೆಗಳಿದ್ದವು. ಅವುಗಳ ಪೈಕಿ ೨೭ ಪುರಸಭೆಗಳು ಆಕ್ಟ್ರಾಯಿ ವಸೂಲಿ ಮಾಡುತ್ತಿರಲಿಲ್ಲ. ಆದ್ದರಿಂದ ಆ ಪುರಸಭೆಗಳಿಗೆ ಆಕ್ಟ್ರಾಯಿ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ.

ಆ) ಬಂದಿದೆ.

ಇ) ಈ) ೧೯೭೧ರ ಜನಗಣತಿಯ ಆಧಾರದ ಮೇಲೆ ಈ ಪುರಸಭೆಗಳಿಗೆ ದಿನಾಂಕ ೨೩-೧-೧೯೮೭ ರಂದು ರೂ. ೧೯,೦೩,೭೭೬.೦೦ಗಳು. ಅನುದಾನ ಬಿಡುಗಡೆ ಮಾಡಲಾಗಿದೆ.

ನೆನೆಗುದಿಗೆ ಬಿದ್ದಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ

೬೭೭. **ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).**—ಮಾನ್ಯ ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾರವಾಡ ಜಿಲ್ಲೆಯ ರೋಣ ತಾಲ್ಲೂಕಿನಲ್ಲಿ ಮಂಜೂರಾಗಿರುವ ಬರಗಾಲ ಪೀಡಿತ ಪ್ರದೇಶಾಭಿವೃದ್ಧಿ ಯೋಜನೆಗಳ ಕೆಲಸವೆಷ್ಟು ?

ಆ) ಈ ಕಾಮಗಾರಿಗಳು ಮಂಜೂರಾಗಿಯೂ ಕಾರ್ಯಗತವಾಗದಿರುವುದಕ್ಕೆ ಕಾರಣಗಳೇನು ?

ಇ) ಮಂಜೂರಾದ ಯೋಜನೆಗಳಲ್ಲಿ ಚಿಕ್ಕ ನೀರಾವರಿ ಕೆಲಸಗಳೆಷ್ಟು ಹಾಗೂ ಅವುಗಳನ್ನು ಯಾವಾಗ ಮುಗಿಸಲಾಗುವುದು.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ೯೬.

ಆ) ಚಿಕ್ಕ ನೀರಾವರಿಗೆ ಸಂಬಂಧಿಸಿದ ೧೦ ಕಾಮಗಾರಿಗಳಿಗೆ ತಾಂತ್ರಿಕ ಮಂಜೂರಾತಿ ಆಗದೇ ಇರುವುದರಿಂದ ಸದರಿ ಕಾಮಗಾರಿಗಳನ್ನು ಪ್ರಸ್ತುತ ವರ್ಷದಲ್ಲಿ ಕಾರ್ಯಗತ ಮಾಡಲು ಆಗಿಲ್ಲ.

ಇ) ೧೦ ಕಾಮಗಾರಿಗಳು ಅವುಗಳನ್ನು ೧೯೮೭-೮೮ನೇ ಸಾಲಿನ ಮೊದಲನೇ ಭಾಗದಲ್ಲಿ ಮುಗಿಸಲಾಗುವುದು.